ಶ್ರೀ ಕೆ. ಆರ್ ಶ್ರೀನಿವಾಸುಲು ನಾಯ್ಡು.—ಸ್ವಾಮಿ, ಇವೊತ್ತು ಬೆಂಗಳೂರಿನಲ್ಲಿ ಕ್ರಿಕೆಟ್ ಸ್ಪೋರ್ಟಿಯಂ ಆಗಿದೆ ಫುಟ್‌ಬಾಲ್ ಸ್ಪೋರ್ಟಿಯಂ ಆಗಿದೆ, ಆದರೆ ಹಾಕಿ ಟೀಮ್ ಆಸೋಸಿಯೇಷನ್ ಅವರಿಗೂ ಸರ್ಕಾರದವರಿಗೂ ಏನೋ ಭಿನ್ನಾಭಿಪ್ರಾಯ ಇದೆ ಎಂದು ತಿಳಿದಿದ್ದೇನೆ, ಆದ್ದರಿಂದ ಇದನ್ನು ಸರ್ಕಾರದವರೇ ತೆಗೆದುಕೊಂಡು ಹಾಕಿ ಸ್ಪೋರ್ಟಿಯಂ ಕಟ್ಟಲಿಕ್ಕೆ ಪ್ರಯತ್ನ ಮಾಡ ತ್ತೀರಾ?

ಶ್ರೀ ಆರ್ ಗುಂಡೂರಾವ್.—ಸರ್ಕಾರದವರೇ ಲೀಡ್ ತೆಗೆದುಕೊಂಡು ಮಾಡುವುದಕ್ಕಾಗುವುದಿಲ್ಲ ಹಾಕಿ ಟೀಮ್ ಆಸೋಸಿಯೇಷನ್ ಅವರೇ ಮುಂದೆ ಬಂದರೆ ಅವರಿಗೆ ಸಕಲ ಸಹಾಯ ಮಾಡಲಿಕ್ಕೆ ಸರ್ಕಾರ ಸದಾ ಸಿದ್ಧ ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸ್ವಾಮಿ, ನಮ್ಮ ಕರ್ನಾಟಕದಲ್ಲಿ ಔಟ್‌ಡೋರ್ ಸ್ಪೋರ್ಟಿಯಂ ಅದಷ್ಟಾಗಿ ಆಯಿತು. ಆದರೆ ಇನ್ ಡೋರ್ ಸ್ಪೋರ್ಟಿಯಂ ಇಲ್ಲ. ಈಗ ಕಲ್ಕತ್ತಾ, ಬಾಂಬೆ, ಡೆಲ್ಲಿ ಮುಂತಾದ ಕಡೆಗಳಲ್ಲಿ ಇನ್ ಡೋರ್ ಸ್ಪೋರ್ಟಿಯಂ ಇವೆ, ಆದ್ದರಿಂದ ನಮ್ಮ ಕರ್ನಾಟಕದಲ್ಲೂ ಕೂಡ ಒಂದು ಇನ್ ಡೋರ್ ಸ್ಪೋರ್ಟಿಯಂ ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ತಾವು ಹೇಳತಕ್ಕದ್ದು ಉತ್ತಮವಾದ ಸಲಹೆ. ಇವೊತ್ತು ನಮ್ಮ ಇರಾಖೆಗೆ ಹೆಚ್ಚು ಹಣ ಒಕ್ಕಿದರೆ ಇನ್ ಡೋರ್ ಸ್ಪೋರ್ಟಿಯಂ ಕಟ್ಟಲಿಕ್ಕೆ ವಿರೋಧ ಇಲ್ಲ.

ಶ್ರೀ ಎಂ ಬಿ ರಾಮಸ್ವಾಮಿ —ಸ್ವಾಮಿ, ಇವೊತ್ತು ಸ್ಪೋರ್ಟಿಯಂ ಕಟ್ಟಬೇಕಾದರೆ, ಸಕಲ ಸಹಾಯ ಮಾಡುತ್ತೇವೆ ಎಂದು ಹೇಳಿದಿರಿ. ಇವೊತ್ತು ಬಹು ಭಾಗ ಜನರು ಕೊಡಗಿನವರು ಹಾಕಿ ಆಟ ಆಡವರು ಆಲ್ ಇಂಡಿಯಾ ಲೆವೆಲ್‌ನಲ್ಲಿ ಇದ್ದಾರೆ, ಈ ದಿಸೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಒಂದು ಹಾಕಿ ಸ್ಪೋರ್ಟಿಯಂ ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಗೂ ಇದಕ್ಕೂ ಸಂಬಂಧಪಡುವುದಿಲ್ಲ.

Cadres of Field Assistants in the Department of Agriculture

321. Sri B. M. Horakeri (Guledgud).—Will the Minister for Agriculture be pleased to state.—

(*a*) whether there is a proposal to make the Cadres of Field Assistants on par with Agricultural Assistants;

(*b*) if so, whether all the Field Assistants working in the Department of Agriculture are treated as Agricultural Assistants;

(*c*) whether the Seniority list of Agricultural Assistants and Field Assistants appointed after 1st November 1965 has been prepared and published;

(*d*) if not, why it is delayed and what are the difficulties and when the list will be finally published ?

Sri N. Chikke Gowda (Minister for Agriculture).—

(*a*) and (*b*) Revised pay scales made effective from 1st January 1977 provide for the same scale for Field Assistants and Agricultural Assistants. A recommendation has been made that Field Assistants should be given training to bring them on par with Agricultural Assistants. This matter is under consideration.

(*c*) Yes, however, such lists need not be published in the Gazette. The lists are kept in the Directorate.

(*d*) Does not arise.

ಶ್ರೀ ಬಿ.ಎಂ. ಹೊರಕೇರಿ.—ಸ್ವಾಮಿ, ತಮ್ಮ ಉತ್ತರದಲ್ಲಿ ಕ್ಷೇತ್ರ ಸಹಾಯಕರಿಗೆ ತರಬೇತಿ ನೀಡಲಾಗುವುದು ಎಂದು ಹೇಳಿದ್ದೀರಿ. ಇಲ್ಲಿಯವರೆಗೆ ಫೀಲ್ಡ್ ಅಸಿಸ್ಟೆಂಟ್‌ಗಳು 9 ತಿಂಗಳು, 12 ತಿಂಗಳು, 24 ತಿಂಗಳು ಸಕ್ಕರೆ ಕ್ಷೇತ್ರದ ವಿಚಾರದಲ್ಲಿ ಟ್ರೈನಿಂಗ್ ಪಡೆದು ಬಂದು, ನಮ್ಮಲ್ಲಿ 25 ವರ್ಷದಿಂದ ಫೀಲ್ಡ್ ಅಸಿಸ್ಟೆಂಟಾಗಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ಅವರಿಗೆ ಪುನಃ ಟ್ರೈನಿಂಗ್ ಕೊಡುವುದರಿಂದ ಅವರಿಗೆ ಹೆಚ್ಚಿಗೆ ಪಗಾರ ಕೊಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಟ್ರೈನಿಂಗ್ ಕೊಡುವುದನ್ನು ತಪ್ಪಿಸಲಕ್ಕೆ ಸಾಧ್ಯ ಇದೆಯೇ?

†ಶ್ರೀ ಎನ್. ಚಿಕ್ಕೇಗೌಡ ನುಮಾರು 20–25 ವರ್ಷ ಸರ್ವೀಸ್ ಆಗಿರತಕ್ಕವರಿಗೆ ಸಾಕಷ್ಟು ಅನುಭವ ಆಗಿರುವುದರಿಂದ ಅವರಿಗೆ ತರಬೇತಿ ಅವಶ್ಯವಾಗುವುದಿಲ್ಲ.

ಶ್ರೀ ಬಿ ಎಂ. ಹೊರಕೇರಿ.—ಇದನ್ನು ಬೇರೆಯವರಿಗೂ ಮಾಡಲಿಕ್ಕೆ ಸಾಧ್ಯವೇ.

ಶ್ರೀ ಎನ್. ಚಿಕ್ಕೇಗೌಡ.—ಅವರು ಎಷ್ಟುವರ್ಷ ಸರ್ವೀಸ್ ಮಾಡಿದ್ದಾರೆ ಎನ್ನುವುದರ ಮೇಲೆ ಹೋಗುತ್ತದೆ.

ಶ್ರೀ ಬಿ ಎಂ. ಹೊರಕೇರಿ.—ಸ್ವಾಮಿ, ವೇತನ ಆಯೋಗದವರ ಪ್ರಕಾರ ಫೀಲ್ಡ್ ಅಸಿಸ್ಟೆಂಟ್ ಗಳಿಗೆ ವೇತನ ಕೊಟ್ಟಿರತಕ್ಕದ್ದು ಸೇವಾ ನಿಯಮಾವಳಿಗಳಲ್ಲಿ ತಿದ್ದುಪಡಿಯಾಗಿದೆಯೇ?

ಶ್ರೀ ಎನ್. ಚಿಕ್ಕೇಗೌಡ.—ಇನ್ನು ಆಗಿಲ್ಲ, ಆಗಬೇಕಾಗಿದೆ.

ಶ್ರೀ ಬಾಪುಗೌಡ.—ಸ್ವಾಮಿ, ತಮ್ಮ ಉತ್ತರದಲ್ಲಿ ಪಟ್ಟಿ ತಯಾರಾಗಿದೆ, ಅದನ್ನು ಗೆಜೆಟ್ ನಲ್ಲಿ ಪಬ್ಲಿಷ್ ಮಾಡಿಲ್ಲ ಎಂದು ಹೇಳಿದ್ದೀರಿ, ಆ ಪಟ್ಟಿ ಪಬ್ಲಿಷ್ ಮಾಡುವುದಕ್ಕೆ ಏಕೆಂದರೆ ಏನು ಇದೆ?

ಶ್ರೀ ಎನ್. ಚಿಕ್ಕೇಗೌಡ.—ಈಗ 1-11-1956ರಲ್ಲಿ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪಬ್ಲಿಷ್ ಆಗಿದೆ. ನಂತರ 2-11-1956 ರಿಂದ 31-12-1956ರವರೆಗೆ ಗ್ರೇಡೇಷನ್ ಲಿಸ್ಟ್ ಪಬ್ಲಿಷ್ ಆಗಿದೆ. ಮತ್ತೆ 1-1-1961 ರಿಂದ 30-4-1977ರ ವರೆಗೆ ಪಬ್ಲಿಷ್ ಮಾಡಲಕ್ಕೆ ಲಿಸ್ಟ್ ತಯಾರಿದೆ.

ಶ್ರೀ ಬಿ. ಎಂ. ಹೊರಕೇರಿ.- ಸ್ವಾಮಿ, ಈಗಾಗಲೇ ಕೆಲವರಿಗೆ ಪ್ರಮೋಷನ್ ಸಿಕ್ಕುವ ಸಂದರ್ಭ ಇತ್ತು, ಇಲ್ಲಿಯತನಕ ಲಿಸ್ಟ್ ಪ್ರಕಟಣೆಯಾಗಿದ್ದು ತಿಳಿದುಬಂದಿದ್ದರೆ, ತಕ್ಕಂದರೆಯಾಗತಕ್ಕವರು ಅಬ್ಜೆಕ್ಷನ್ ಮಾಡಲಿಕ್ಕೆ ಅನುಕೂಲವಾಗುತ್ತಾ ಇರಲಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ.—ಲಿಸ್ಟ್‌ನ್ನು ಅಧಿಕೃತವಾಗಿ ಸರ್ಕಾರಿ ಕಚೇರಿಗಳಲ್ಲಿ ಹಾಕಿದ ಮೇಲೆ ಎಲ್ಲರಿಗೂ ಅದನ್ನು ನೋಡತಕ್ಕಂಥ ಮತ್ತು ಅದರ ಬಗ್ಗೆ ಮಾಹಿತಿ ಪಡೆಯತಕ್ಕಂಥ ಹಕ್ಕಿದೆ. ಇದನ್ನು ಪಬ್ಲಿಶ್ ಮಾಡಿದ್ದೇವೆ

ಶ್ರೀ ಎಂ.ಬಿ ರಾಮಸ್ವಾಮಿ.—ಸ್ವಾಮಿ, ಮೂರು ಲಿಸ್ಟ್ ಇದೆಯೆಂದು ಹೇಳಿದಿರಿ. ಆ ರೀತಿ 3 ಲಿಸ್ಟ್ ಇರುವುದರಿಂದ ಸೀನಿಯಾರಿಟಿ ಬಗ್ಗೆ ತರಕಾರು ಬಂದು ನಾಳೆ ದಿವಸ ಪ್ರಮೋಷನ್ ಕಾಲದಲ್ಲಿ ಅವರಿಗೆ ಅನ್ಯಾಯವಾಗುವುದಿಲ್ಲವೇ? ಅದಲ್ಲದೆ 15-2 ವರ್ಷ ಸೇವೆ ಮಾಡಿರತಕ್ಕಂಥವರಿಗೆ ಪ್ರಮೋಷನ್‌ನಲ್ಲಿ ಅನ್ಯಾಯವಾಗುವುದನ್ನು ಸರಿಪಡಿಸುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎನ್ ಚಿಕ್ಕೇಗೌಡ.—3-4 ಲಿಸ್ಟ್‌ನ್ನು ಅವರು ಯಾವಯಾವ ವರ್ಷದಲ್ಲಿ ಸೇರಿದ್ದಾರೆ, ಅವರ ಸೇವಾ ನಿಯಮ ಎಷ್ಟು ಎನ್ನುವುದನ್ನೆಲ್ಲಾ ತಿಳಿಯುವುದಕ್ಕೆ ಅನುಕೂಲವಾಗುವಂತಾಗಲು ಮಾಡಿದ್ದೇವೆ ಈ ಫೀಲ್ಡ್ ಅಸ್ಸೆಂಟ್ಸ್ ಮತ್ತು ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್ ಏನಿದ್ದಾರೆ ಅವರ ಬಗ್ಗೆ ಸರ್ಕಾರದವರು ಏನು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ ಹಾಗೂ ಕೆಲವರು ಕೋರ್ಟಿಗೆ

ಹೋಗಿ ಅಲ್ಲಿಂದ ಏನು ನಿರ್ಣಯವನ್ನು ಪಾಸ್ ಮಾಡಿಸಿಕೊಂಡುಬಂದಿರುತ್ತಾರೆ ಅದರ ಬಗ್ಗೆ ಎಲ್ಲಾ ನಾವು ಲಿಸ್ಟ್‌ನ್ನು ತಯಾರು ಮಾಡಿರುತ್ತೇವೆ ಇದೆಲ್ಲಾ ವಿವರಗಳನ್ನು ಒಳಗೊಂಡಂತೆಯೇ ಒಂದು ಲಿಸ್ಟ್‌ನ್ನು ತಯಾರು ಮಾಡಿದ್ದನ್ನೇ ನಾವು ಪಬ್ಲಿಷ್ ಮಾಡಿದ್ದೇವೆ, ಹಾಗೂ ಲೇಟೆಸ್ಟ್ ಗೆಜೆಟ್‌ನಲ್ಲಿಯೂ ಕೂಡ ನೋಟಿಫೈ ಆಗಿದೆ.

ಶ್ರೀ ಎಂ ಬಿ. ರಾಮಸ್ವಾಮಿ.—ಮೂಲಭೂತವಾಗಿ ತಾವು ಏನು ಗೆಜಟ್ ಪಬ್ಲಿಷ್‌ನಲ್ಲಿ ಮಾಡಿದ್ದೀರಿ ಅದನ್ನು ಪಬ್ಲಿಶ್ ಮಾಡುವಾಗ ಆಬ್ಜೆಕ್ಷನ್‌ಗೆ ಏನಾದರೂ ಇದೆಯೇ ಎನ್ನುವ ಬಗ್ಗೆ ತಾವು ಆಬ್ಜೆಕ್ಷನ್‌ಗೆ ಕಾಲಫಾರ್ ಮಾಡಬೇಕಾಗಿತ್ತು, ಆಗ ಆವರು ಸರಿಯಾದ ಇನ್‌ಫರ್ಮೇಷನ್ ನನ್ನು ತಮಗೆ ಕೊಡುವುದಕ್ಕೆ ಅನುಕೂಲವಾಗುತ್ತಿತ್ತು. ತಾವು ಈಗಲಾದರೂ ಅದನ್ನು ಮಾಡುವುದಕ್ಕೆ ಆಗುತ್ತದೆಯೆ?

ಶ್ರೀ ಎನ್. ಚಿಕ್ಕೇಗೌಡ.—ಅದರ ಬಗ್ಗೆ ಪಬ್ಲಿಶ್ ಮಾಡಿದ್ದೇವೆಂದೇ ಮಾನ್ಯ ಸದಸ್ಯರಿಗೆ ಹೇಳಿದ್ದು.

ಶ್ರೀ ಎಂ.ಬಿ. ರಾಮಸ್ವಾಮಿ.—ತಾವು ಇದನ್ನು ಫೈನಲೈಜ್ ಮಾಡುವುದಕ್ಕಿಂತ ಮುಂಚಿತವಾಗಿ ಆಬ್ಜೆಕ್ಷನ್ ಕಾಲ್‌ಫಾರ್ ಮಾಡಿದ್ದರೆ ಚೆನ್ನಾಗಿತ್ತು, ಆದರೂ ಪರವಾಗಿಲ್ಲ 20-30 ಸರ್ವೀಸ್ ಮಾಡಿರತಕ್ಕಂಥವರಿಗೆ ಸೀನಿಯಾರಿಟಿ ಓವರ್ ಲುಕ್ ಆಗದ ಹಾಗೆ ರಕ್ಷಣೆ ಕೊಡುತ್ತೀರಾ?

SRI N. CHIKKE GOWDA.—Certainly the Government will review if there are any objections and will take remedial action.

Raising the Tank Bund Level of Durga Tank

339 SRI N BASAVAIAH (Chikkanayakanahalli).—Will the Minister of State for Minor Irrigation and Protocol be pleased to state:—

(*a*) whether the estimate has been prepared by the Government for raising the tank bund level of Durga Tank in Chikkanayakanahalli Kasaba hobli in which silt is formed;

(*b*) if so, whether Government has taken action to accord sanction and start the work early?

SRI H.C SRIKANTAIAH (Minister of State for Minior Irrigation and Protocol).—

(*a*) No.

(*b*) This question does not arise in view of reply to clause '*a*'

ಶ್ರೀ ಎನ್. ಬಸವಯ್ಯ.—ಸ್ವಾಮಿ ನನ್ನ ಆ ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ. ಅವರೆ ಆ ಕೆರೆ ಮೈನಿಂಗ್‌ಗೆ ಹತ್ತಿರವಿರುವುದರಿಂದ ಸಿಲ್ಟ್ ಟಿಪ್ ಆಗಿರುವುದರಿಂದ ಸುಮಾರು 3 ಸಾವಿರ ಎಕರೆ ತೋಟಕ್ಕೆ ನೀರು ಇಲ್ಲವೆ ಬಹಳ ತೊಂದರೆಯಾಗಿದೆ ಅಲ್ಲಿ ಏರಿ ಗಟ್ಟಾವಣೆ ಮಾಡುವುದಕ್ಕೆ ಅವಕಾಶವಿದೆ ಮತ್ತು ಜ್ಯುಯಾಲಿಜಿಸ್ಟ್ ರವರು ಅಲ್ಲಿ ಬೋರ್‌ವೆಲ್ ಹಾಕಿ ನೀರನ್ನು ಹಾಯಿಸಲು ಸಾಧ್ಯವಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದುದರಿಂದ ಆ ಕೆಲಸವನ್ನು ಮಾಡಿಸಿಕೊಡುತ್ತೀರಾ ಸ್ವಾಮಿ?

† ಶ್ರೀ ಎಚ್ ಸಿ. ಶ್ರೀಕಂಠಯ್ಯ.—ಅದು ಇನ್‌ವೆಸ್ಟಿಗೇಷನ್‌ನಲ್ಲಿದೆ.

ಶ್ರೀ ಎನ್ ಬಸವಯ್ಯ.—ಸ್ವಾಮಿ ಅಲ್ಲಿ ಇನ್‌ವೆಸ್ಟಿಗೇಷನ್ ಈಗಾಗಲೇ ಆಗಿದೆ. 3 ಸಾವಿರ ಎಕರೆ ಆಯ್ಕಟ್ಟಿನ್ನು ಇದ್ದು, 5 ಸಾವಿರ ತೆಂಗಿನ ತೋಟ ನೀರಿಲ್ಲದೆ ಹಾಳಾಗಿ ಹೋಗುತ್ತಿದೆ. ಒಂದು ನೂರು ಎಕರೆಯಲ್ಲಿ ಅಡಿಕೆ ತೋಟ ಬೇರೆ ಇದೆ. ಅಲ್ಲ ಒಂದು ವರ್ಷ ಬೆಳೆ ಹೋಯಿತೆಂದರೆ ಬಹಳ